# ಗ್ರಾಹಕರ ಹಣ, ಬ್ಯಾಂಕುಗಳ ದರ್ಬಾರು!

ಬ್ಯಾಂಕುಗಳು ಜನಸಾಮಾನ್ಯರಿಂದ ದೂರ ಹೋಗುತ್ತಿವೆಯೆ? ಜನಸಾಮಾನ್ಯರು ಬ್ಯಾಂಕುಗಳ ಮೇಲೆ ಇಟ್ಟಿರುವ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆಯೆ? ಬ್ಯಾಂಕು ವಹಿವಾಟುಗಳು ದುಬಾರಿಯಾದರೆ ನೈಜ ಲಾಭ ಯಾರಿಗೆ? ದೇಶದ ಆರ್ಥಿಕ ದೃಢತೆಯನ್ನೂ, ಜನರ ಆರ್ಥಿಕ ಸ್ವಾತಂತ್ರ್ಯವನ್ನೂ ದೃಢಚಿತ್ತದಿಂದ ಕಟ್ಟಿದ ಬ್ಯಾಂಕುಗಳು ಈಗೇಕೆ ಜನರ ಮೇಲೆ ಏಕಪಕ್ಷೀಯ ನಿರ್ಧಾರಗಳ ಮೂಲಕ ದರ್ಬಾರು ನಡೆಸಲು ಹೊರಟಿವೆ? ಬ್ಯಾಂಕುಗಳ ಒಟ್ಟು ಆರ್ಥಿಕ ಚಿತ್ರಣವೇ ಬದಲಾಗುತ್ತಿರುವ ಹಿನ್ನೆಲೆಯಲ್ಲಿ ಮೇಲಿನ ಪ್ರಶ್ನೆಗಳು ಈಗ ಮಹತ್ವ ಪಡೆದುಕೊಂಡಿವೆ.

ಕಳೆದ ವಾರ ಭಾರತದ ಪ್ರಮುಖ ಖಾಸಗಿ ಬ್ಯಾಂಕುಗಳಾದ ಎಚ್‌ಡಿಎಫ್‌ಸಿ ಬ್ಯಾಂಕ್, ಎಕ್ಸಿಸ್ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕುಗಳು ಗ್ರಾಹಕರ ನಗದು ವಹಿವಾಟು ಮತ್ತು ನಗದು ವಾಪಸಾತಿಗಳಿಗೆ ಅತ್ಯಧಿಕ ಶುಲ್ಕಗಳನ್ನು ವಿಧಿಸಲು ನಿಧಾರ ಕೈಗೊಂಡವು. ಮಾರ್ಚ್ 1ರಿಂದ ಜಾರಿಗೆ ಬಂದಿರುವ ಈ ನಿರ್ಧಾರದ ಪ್ರಕಾರ, ತಿಂಗಳಲ್ಲಿ ಮೊದಲ ನಾಲ್ಕು ವಹಿವಾಟುಗಳ ಬಳಿಕ ಮುಂದಿನ ಪ್ರತಿ ವಹಿವಾಟಿಗೂ ಗ್ರಾಹಕನಿಗೆ ಕನಿಷ್ಠ 150 ರೂಪಾಯಿ ದಂಡ ಶುಲ್ಕ ವಿಧಿಸಲು ಈ ಬ್ಯಾಂಕುಗಳು ನಿರ್ಧರಿಸಿವೆ. ಖಾಸಗಿ ಬ್ಯಾಂಕುಗಳ ಈ ನಿರ್ಧಾರದ ಬೆನ್ನಲ್ಲೇ ರಾಷ್ಟ್ರೀಕೃತ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕೂಡಾ ಗ್ರಾಹಕರ ತಿಂಗಳ ಮೊದಲ ಮೂರು ವಹಿವಾಟುಗಳ ಬಳಿಕದ ಪ್ರತಿಯೊಂದು ವಹಿವಾಟಿಗೂ 50 ರೂಪಾಯಿ ಶುಲ್ಕ ವಿಧಿಸುವುದಾಗಿ ಪ್ರಕಟಿಸಿದೆ. ಈ ದಂಡಶುಲ್ಕ ಪದ್ಧತಿ ಶೂನ್ಯ ಬ್ಯಾಲನ್ಸ್ ಇರುವ ಖಾತೆ ಮತ್ತು ಸಂಬಳದ ಖಾತೆಗಳಿಗೂ ಅನ್ವಯವಾಗಲಿದೆ. ದೇಶದ ಅತಿದೊಡ್ಡ ಬ್ಯಾಂಕಿನ ಈ ನಡೆಯನ್ನು ಉಳಿದೆಲ್ಲ ರಾಷ್ಟ್ರೀಕೃತ ಬ್ಯಾಂಕುಗಳೂ ಶೀಘ್ರವೇ ಹಿಂಬಾಲಿಸುವ ಸೂಚನೆಗಳಿವೆ. ಈ ಕ್ರಮಗಳು ಎಟಿಎಂ ನಿಂದ ಪಡೆಯುವ ನಗದು ವಹಿವಾಟಿಗೆ ಸಂಬಂಧಿಸುವುದಿಲ್ಲ, ಬ್ಯಾಂಕುಗಳಲ್ಲಿ ನಡೆಸುವ ನೇರ ವಹಿವಾಟಿಗೆ ಮಾತ್ರ ಸಂಬಂಧಿಸಿವೆ ಎಂದು ಬ್ಯಾಂಕುಗಳು ಸ್ಪಷ್ಟಪಡಿಸಿವೆ. ಜನರಲ್ಲಿ ನಗದು ವಹಿವಾಟಿನ ಪ್ರಮಾಣವನ್ನು ತಗ್ಗಿಸಿ ಡಿಜಿಟಲ್ ವಹಿವಾಟನ್ನು ಉತ್ತೇಜಿಸುವುದು ಬ್ಯಾಂಕುಗಳ ಈ ಕ್ರಮದ ಹಿಂದಿನ ಉದ್ದೇಶ ಎನ್ನಲಾಗುತ್ತಿದೆ.

ನಗರಗಳಲ್ಲಿ ಕೇಂದ್ರೀಕೃತವಾಗಿರುವ ಬಹುತೇಕ ಬ್ಯಾಂಕುಗಳಲ್ಲಿ ಹೆಚ್ಚಿನ ವಹಿವಾಟು ಬ್ಯಾಂಕು ಕೌಂಟರ್‌ಗಳ ಮೂಲಕವೇ ನಡೆಯುತ್ತಿದೆ, ಎಟಿಎಂ ಗಳಲ್ಲಿ ಹೆಚ್ಚಾಗಿ ನಗದು ಪಡೆಯುವುದು ಮಾತ್ರ ನಡೆಯುತ್ತಿದ್ದು ಅದೂ ಕಡಿಮೆ ಪ್ರಮಾಣದಲ್ಲಿದೆ. 500 ಮತ್ತು 1000 ರೂಪಾಯಿ ನೋಟುಗಳ ಅಪಮೌಲ್ಯೀಕರಣದ ಬಳಿಕ ಬಹುತೇಕ ಬ್ಯಾಂಕುಗಳ ಎಟಿಎಂ ಗಳು ಬಾಗಿಲು ಮುಚ್ಚಿವೆ. ಅಥವಾ ಅಲ್ಲಿನ ಎಟಿಎಂ ಗಳಲ್ಲಿ ದೊಡ್ಡ ಮೊತ್ತದ ಹಣವನ್ನು ಪಡೆಯಲು ಆಗುತ್ತಿಲ್ಲ. ಹಾಗಾಗಿ ಬಹುತೇಕ ಗ್ರಾಹಕರು ಬ್ಯಾಂಕುಗಳಲ್ಲೇ ನೇರ ವಹಿವಾಟು ನಡೆಸುತ್ತಿದ್ದಾರೆ. ಈ ಹೆಚ್ಚುವರಿ ವಹಿವಾಟು ಮೇಲಿನ ದಂಡಶುಲ್ಕ ಗ್ರಾಹಕರಿಗೆ ದೊಡ್ಡ ಹೊರೆಯಾಗುವುದರಲ್ಲಿ ಸಂಶಯವೇ ಇಲ್ಲ. ಬ್ಯಾಂಕುಗಳ ಈ ಏಕಪಕ್ಷೀಯ ತೀರ್ಮಾನಕ್ಕೆ ಕೇಂದ್ರ ಸರ್ಕಾರವೂ ಕಣ್ಣುಮುಚ್ಚಿ ಬೆಂಬಲ ನೀಡುತ್ತಿರುವುದು ವಿಪರ್ಯಾಸ. ಜನಪ್ರತಿನಿಧಿಗಳು ಬ್ಯಾಂಕುಗಳ ಈ ದರ್ಬಾರಿನ ಬಗ್ಗೆ ಮಾತನಾಡುತ್ತಿಲ್ಲ.

ಗ್ರಾಹಕರಲ್ಲಿ ಡಿಜಿಟಲ್ ವಹಿವಾಟು ಅಭ್ಯಾಸವನ್ನು ಬೆಳೆಸುವುದು ಒಳ್ಳೆಯದು ಎನ್ನುವುದರಲ್ಲಿ ಎರಡು ಮಾತಿಲ್ಲ. ಅದನ್ನು ಪ್ರೋತ್ಸಾಹಕ ಕ್ರಮಗಳ ಮೂಲಕ ಉತ್ತೇಜಿಸಬೇಕೇ ಹೊರತು ದಂಡಶುಲ್ಕ ಮುಂತಾದ ಋಣಾತ್ಮಕ ಕ್ರಮಗಳಿಂದ ಅಲ್ಲ. ಈ ಕ್ರಮ ಸಂಬಳದ ಖಾತೆಗೆ ಮತ್ತು ಝೀರೊ ಬ್ಯಾಲನ್ಸ್ ಖಾತೆಗೂ ಅನ್ವಯಿಸುತ್ತಿರುವುದು ಮಧ್ಯಮವರ್ಗಕ್ಕೆ ಛಡಿಯೇಟಿನ ಶಿಕ್ಷೆ ವಿಧಿಸಿದಂತೆಯೇ ಸರಿ. ಜನಸಾಮಾನ್ಯರು ಇಂತಹ ಕ್ರಮಗಳಿಂದ ಬ್ಯಾಂಕುಗಳ ಮೇಲಿನ ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಈ ದುಬಾರಿ ಕಾಲದಲ್ಲಿ ಬರುವ ಸಂಬಳವನ್ನು ಯೋಜಿತವಾಗಿ ಖರ್ಚು ಮಾಡಲು ಹೆಣಗಾಡುತ್ತಿರುವ ಜನರ ಮೇಲೆ ದಂಡಶುಲ್ಕಗಳ ಭಾರ ಹೊರಿಸುವುದು ಎಷ್ಟು ಸರಿ? ನೂರಾರು ಕೈಗಾರಿಕೋದ್ಯಮಿಗಳಿಗೆ ವಿವೇಚನೆಯಿಲ್ಲದೆ ಕೋಟಿಗಟ್ಟಳೆ ಸಾಲ ಕೊಟ್ಟು, ಮರಳಿಬಾರದ ಸಾಲದ ದೊಡ್ಡ ಹೊರೆಯನ್ನೇ ಹೊತ್ತುಕೊಂಡಿರುವ ಬ್ಯಾಂಕುಗಳು, ಆ ಹೊರೆಯನ್ನು ಹೀಗೆ ಜನಸಾಮಾನ್ಯರ ಮೇಲೆ ಜಾಣತನದಿಂದ ವರ್ಗಾಯಿಸುತ್ತಿರುವುದು ಎಷ್ಟು ಸರಿ? ಮೂರಕ್ಕಿಂತ ಹೆಚ್ಚಿನ ವಹಿವಾಟಿಗೆ ದಂಡಶುಲ್ಕ ವಿಧಿಸುವ ಹಿನ್ನೆಲೆಯಲ್ಲಿ ಜನಸಾಮಾನ್ಯರು ಬ್ಯಾಂಕಿಗೆ ಬರುವುದನ್ನೇ ಕಡಿಮೆ ಮಾಡಬಹುದು. ಹೆಚ್ಚಿನವರು ದುಡಿದ ಹಣವನ್ನು ಮನೆಯಲ್ಲೇ ಇಟ್ಟುಕೊಂಡು ವಹಿವಾಟು ನಡೆಸುವ ಸಾಧ್ಯತೆ ಇದೆ. ಗ್ರಾಮೀಣ ಪ್ರದೇಶದಲ್ಲಿ ರೈತರು ಮತ್ತು ಸಣ್ಣ ವ್ಯಾಪಾರಿಗಳು ಈಗಲೂ ನಗದು ವಹಿವಾಟಿನ ಮೇಲೆಯೇ ಹೆಚ್ಚು ಅವಲಂಬಿತರಾಗಿರುವುದು ಸ್ಪಷ್ಟ. ಬ್ಯಾಂಕುಗಳ ಈ ಕ್ರಮದಿಂದಾಗಿ ಅವು ಕೇವಲ ಶ್ರೀಮಂತರು ಮತ್ತು ದೊಡ್ಡ ಉದ್ಯಮಿಗಳ ಪರವಾಗಿ ಮಾತ್ರ ಕೆಲಸ ಮಾಡುತ್ತಿವೆ ಎಂಬ ಭಾವನೆ ಬೆಳೆಯಲಿದೆ.

ಪ್ರಜಾಪ್ರಭುತ್ವದಲ್ಲಿ ಎಲ್ಲರನ್ನೂ ಒಳಗೊಳ್ಳಬೇಕಾದ ಆರ್ಥಿಕ ವ್ಯವಸ್ಥೆ, ಹೀಗೆ ಕೆಲವೇ ಜನರ ಸೊತ್ತಾದರೆ ಅಪಾಯ ತಪ್ಪಿದ್ದಲ್ಲ. ಕಳೆದ ಶತಮಾನದ 70ರ ದಶಕದಲ್ಲಿ ಆಗಿನ ಪ್ರಧಾನಿ ಇಂದಿರಾಗಾಂಧಿಯವರು ಕೇವಲ ಸಿರಿವಂತರ ಕೈಗೂಸಾಗಿದ್ದ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿ ಜನಸಾಮಾನ್ಯರ ಮನೆಬಾಗಿಲಿಗೇ ಬ್ಯಾಂಕುಗಳು ಬರುವಂತಹ ದಿಟ್ಟ ಕ್ರಮಗಳನ್ನು ಕೈಗೊಂಡರು. ಈಗ ನೋಡಿದರೆ ಇತಿಹಾಸದ ಚಕ್ರ ಒಂದು ಸುತ್ತು ಬಂದು, ಬ್ಯಾಂಕುಗಳು ಮತ್ತೆ ಉಳ್ಳವರ ಸೊತ್ತಾಗುವ ಸಾಧ್ಯತೆಯೇ ಕಾಣಿಸುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರಕಾರ ಈ ವಿದ್ಯಮಾನಗಳತ್ತ ಕಣ್ಣುಮುಚ್ಚಿ ಕುಳಿತುಕೊಳ್ಳುವುದು ಎಳ್ಳಷ್ಟೂ ಸರಿಯಲ್ಲ.

■ ಬಿ.ಎಂ.ಹನೀಫ್

ಬ್ಯಾಂಕ್‌ಗಳು ಗ್ರಾಹಕರಲ್ಲಿ ಡಿಜಿಟಲ್ ವಹಿವಾಟನ್ನು ಬೆಳೆಸುವುದು ಒಳ್ಳೆಯದು. ಆದನ್ನು ಪ್ರೋತ್ಸಾಹಕ ಕ್ರಮಗಳ ಮೂಲಕ ಉತ್ತೇಜಿಸಬೇಕೇ ಹೊರತು ದಂಡಶುಲ್ಕ ದಿಂದ ಅಲ್ಲ. ಇದು ಸಂಬಳದ ಖಾತೆಗೆ ಮತ್ತು ಝೀರೊ ಬ್ಯಾಲನ್ಸ್ ಖಾತೆಗೂ ಅನ್ವಯಿಸುತ್ತಿರುವುದು ಮಧ್ಯಮವರ್ಗಕ್ಕೆ ಛಡಿಯೇಟಿನ ಶಿಕ್ಷೆ ವಿಧಿಸಿದಂತೆಯೇ ಸರಿ.

